S C.R.P.67

Form No.4<br>(Criminal)<br>Deposition<br>Sheets<br>(R.P.No.57)

**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ**

# ಸ್ಪೆಷಲ್ ಕೇಸ್ ನಂಬರ್: 16/2025

**ಚಾ.ಸಾ.-01 ಪ್ರಾ.ಸಾ.-01**

| | |
|---|---|
| **ಸಾಕ್ಷಿದಾರರ ಹೆಸರು** | **ಕಿರಣಕುಮಾರ್** |
| **ತಂದೆಯ ಹೆಸರು** | **ಕೆಂಪರಾಜು** |
| **ವಯಸ್ಸು** | **37 ವರ್ಷಗಳು** |
| **ಉದ್ಯೋಗ** | **ಕಂಪ್ಯೂಟರ್ ಕೆಲಸ** |
| **ವಾಸ** | **ಚಾಮನಹಳ್ಳಿ ಗ್ರಾಮ, ಮದ್ದೂರು ತಾಲ್ಲೂಕು.** |

**ದಿನಾಂಕ: 23.06.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ 2 ನನ್ನ ಮಾವನ ಮಗ. ನಾವು ಪರಿಶಿಷ್ಟ ಜಾತಿಗೆ ಸೇರಿದವನಾಗಿದ್ದೇನೆ. ಚಸಾ 3 ರಿಂದ 12 ಪರಿಚಯ ಇದ್ದಾರೆ. ಅವರು ನಮ್ಮ ಗ್ರಾಮದವರು. ಆರೋಪಿತರ ಪರಿಚಯ ಇದೆ. ಅವರು ನಮ್ಮ ಗ್ರಾಮದವರು. ಅವರು ಒಕ್ಕಲಿಂಗ ಜನಾಂಗದವರು. ಈಗ ನನಗೆ ತೋರಿಸುತ್ತಿರುವ ದೂರಿನಲ್ಲಿ ಇರುವ ಸಹಿ ನನ್ನದು . ಅದನ್ನು ನಿಪಿ 1 ಎಂದು ಸಾಕ್ಷಿ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ಆರೋಪಿ 2 ರವರ ಅಂಗಡಿ ಬಳಿ ಮಾತುಕತೆ ಆದ ಬಗ್ಗೆ ದೂರು ಕೊಡಲಾಗಿದೆ. ಆರೋಪಿತರುನನಗೆ ಯಾವುದೆ ತೊಂದರೆ ಕೊಟ್ಟಿಲ್ಲ, ಬೈದಿಲ್ಲ ಹೊಡೆದಿಲ್ಲ , ಜಾತಿ ನಿಂದನೆ ಮಾಡಿಲ್ಲ. ಪ್ರಾಣ ಬೆದರಿಕೆ ಹಾಕಿಲ್ಲ. ಹೊಡೆದಿದ್ದಾರೆ ಎಂದು ಯಾವುದೆ ದೂರು ಕೊಟ್ಟಿಲ್ಲ. ಈಗ ನನಗೆ ತೋರಿಸುತ್ತಿರುವ ಮಹಜರನಲ್ಲಿ ನನ್ನ ಸಹಿ ಇದೆ. ದಾಖಲೆಯನ್ನು ನಿಪಿ 2 ಎಂದು ಸಾಕ್ಷಿ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ನಿಪಿ 1 , 2 ರಲ್ಲಿ ಏನು

ಬರೆಯಲಾಗಿದೆ ಗೊತ್ತಿಲ್ಲ. ಪೊಲೀಸರು ವಿಚಾರಿಸಿಲ್ಲ. ಆರೋಪಿತರು ಹೊಡೆದಿದ್ದಾರೆ ಎಂದು ನಾನು ಹೇಳಿಕೆ ಕೊಟ್ಟಿಲ್ಲ , ದೂರು ಕೊಟ್ಟಿಲ್ಲ. ಈಗ ನನಗೆ ತೋರಿಸುತ್ತಿರುವ ಭಾವಚಿತ್ರದಲ್ಲಿ ನಾನು ಕಂಡುಬರುತ್ತೇನೆ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157 ರ ಪ್ರಕಾರ ಅನುಮತಿ ಕೊಡಲಾಯಿತು.)**

**<u>ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

2) ದಿಃ13.12.2024 ರಂದು ರಾತ್ರಿ 8.30 ಸಮಯದಲ್ಲಿ ನಾನು ಮತ್ತು ಚಾಸಾ 2 ರವರು ಕೂಲ್ ಡ್ರಿಂಕ್ಸ್ ಮತು ಸಿಗರೇಟು ಕೇಳಿದೆವು ಎಂದರೆ ಸರಿಯಲ್ಲ. ಆಗ ಆರೋಪಿ 1 , 2 ದುಡ್ಡು ಕೇಳಿದ್ದರಿಂದ ನಾವು ಇದೇ ಊರಿನವರು ನಾವು ಎಲ್ಲಿ ಹೋಗುತ್ತೇವೆ , ತಂದುಕೊಡುತ್ತೇವೆ ಎಂದು ಹೇಳಿದ್ದೆವು ಎಂದರೆ ಸರಿಯಲ್ಲ. ಆಗ ಆರೋಪಿ 1 , 2 ನಮ್ಮನ್ನು ಉದ್ದೇಶಿಸಿ ನೀವು ಮಾದಿಗರು ನಮ್ಮ ಅಂಗಡಿಗೆ ಬರಬೇಡಿ ಎಂದು ಜಾತಿ ನಿಂದನೆ ಮಾಡಿದರು ಎಂದರೆ ಸರಿಯಲ್ಲ. ಅಲ್ಲದೆ ನಿಮಗೆ ಎಷ್ಟು ಧಿಮಾಕು ನೀವು ಮಾದಿಗರಲ್ಲದೆ ಇನ್ಯಾರು ಮಾದಿಗರನ್ನು ಮಾದಿಗರು ಎಂದು ಕರೆದರೆ ಏನು ಮಾಡ್ಕೊತ್ತೀರ ಎಂದು ಬೈದಿದ್ದಾರೆ ಎಂದರೆ ಸರಿಯಲ್ಲ. ಅಲ್ಲದೆ ಮಾದಿಗಸೂಳೆಮಕ್ಕಳ ಬೋಳಿಮಕ್ಕಳ ಎಂದು ಬೈದಿದ್ದಾರೆ ಎಂದರೆ ಸರಿಯಲ್ಲ. ಇದೇ ಸಮಯಕ್ಕೆ ಆರೋಪಿ 3 ರಿಂದ 9 ಅಲ್ಲಿ ಬಂದರು ಎಂದರೆ ಸರಿಯಲ್ಲ. ಅವರು ಕೂಡ ಏಕಾಏಕಿ ಸಾಕ್ಷಿ 1 , 2 ರನ್ನು ಎಳೆದಾಡಿ , ತಳ್ಳಾಡಿ ಮಾದಿಗ ಸೂಳೆಮಕ್ಕಳ ಎಂದು ಬೈದು ಕೊಲೆ ಮಾಡಿ ಮುಗಿಸುತ್ತೇವೆ ಎಂದು ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ನನ್ನನ್ನು ಕೆಳಗಿ ಕೆಡವಿ ತುಳಿದಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣ ನನ್ನ ತಲೆಗೆ ಎದೆಗೆ ಪೆಟ್ಟಾಗಿರುತ್ತದೆ ಎಂದರೆ ಸರಿಯಲ್ಲ. ಈ ಕೃತ ನಡೆದ ಸ್ಥಳದಲ್ಲಿ ಅಳವಡಿಸಿದ್ದ ಸಿಸಿ ಟಿವಿಯ ಡಿವಿಆರ್ ಅನ್ನು ಆರೋಪಿ 2 ನಾಶಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲ ವಿಚಾರಗಳನ್ನು ಉಲ್ಲೇಖಿಸಿ ನಿಪಿ 1 ರಂತೆ ದೂರು ಕೊಟ್ಟಿದ್ದೇನೆಎಂದರೆ ಸರಿಯಲ್ಲ.

3) ಆನಂತರ ನಾನು ಚಿಕಿತ್ಸೆ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಪೊಲಿಸರು ಘಟನ ಸ್ಥ,ಳಕ್ಕೆ ಬಂದು ನಿಪಿ 2 ರಂತೆ ಮಹಜರು ಬರೆದರು ಎಂದರೆ ಸರಿಯಲ್ಲ. ನಾನೆ ಸ್ಥಳ ತೋರಿಸಿದ್ದೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲಿಸರು ಮಹಜರು ಮಾಡಿದರು , ನಾನು ಅದನ್ನು ಓದಿ ತಿಳಿದುಕೊಂಡು ಅಲ್ಲೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ.

4)

5) ಚಾಸಾ 1 ಮತ್ತು 2 ರವರ ಜೊತೆ ಜಗಳ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಸಾ 1 ರವರ ಬಾಗಿಲನ್ನು ಬಡಿದು ಜಖಂಗೊಳಿಸಿದರು ಎಂದರೆ ಸರಿಯಲ್ಲ. ಪಾತ್ರೆಗಳನ್ನು ಇನ್ನಿತರ ವಸ್ತುಗಳನ್ನು ಚಲ್ಲಾಪಿಲ್ಲಿ ಮಾಡಿ ಬಿಸಾಡಿದರು ಎಂದರೆ ಸರಿಯಲ್ಲ. ಅವಾಚ್ಯ ಶಬ್ದಗಳಿಂದ ಬೈದು ಸುಟ್ಟು ಹಾಕುತ್ತೇವೆ ಎಂದು ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಮಾದಿಗ ಸೂಳೆಮಕ್ಕಳೆ ಎಂದು ಬೈದರು ಎಂದರೆ ಸರಿಯಲ್ಲ. ಎಲ್ ಸಿ ಡಿ ಟಿವಿಯನ್ನು ನನ್ನ ಮೇಲೆ ಬಿಸಾಡಿದರು ಎಂದರೆ ಸರಿಯಲ್ಲ. ಚಾಸಾ 9 ರವರಿಗೆ ಸೇರಿದ ಮೋಟಾರು ಸೈಕಲು ಕೆಎ 41 ಇಸಿ 0981 ನ್ನು ಆರೋಪಿ ದೊಣ್ಣೆಯಿಂದ ಹೊಡೆದು ನಷ್ಟ ಮಾಡಿದರು ಎಂದರೆ ಸರಿಯಲ್ಲ. ಈ ಎಲ್ಲ ವಿಚಾರ ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಪೊಲೀಸರಿಗೆ ನಾನು ದಿಃ 30.8.2019 ರಂದು ಈಗ ಓದಿ ಹೇಳಿದಂತೆ ನಾನು ಮೇಲ್ಕಂಡ ವಿಳಾಸದಲ್ಲಿ ----------------ಮತ್ತೆ ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿಪಿ.**10 ಎಂದು ಗುರುತಿಸಲಾಯಿತು. ಈ ಬಗ್ಗೆ ದಿಃ 28.8.2019 ರಂದು ಪೊಲೀಸರು ಸ್ಥಳ ಮಹಜರಿಗೆ ಸ್ಥಳಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ಚಾಸಾ 1 ರವರ ಮನೆಯನ್ನು ಪರಿಶೀಲಿಸಿದರು ಎಂದರೆ ಸರಿಯಲ್ಲ. ವಸ್ತುಗ.ಳು ಚಲ್ಲಾಪಿಲ್ಲಿಯಾಗಿದ್ದು ಮತ್ತು ವಾಹನಕ್ಕೆ ಜಖಂ ಆಗಿದುನ್ನು ಪೊಲೀಸರು ಗಮನಿಸಿದರು ಮತ್ತು ಅದಕ್ಕೆ ಮೌಲ್ಯ ಮಾಡಿದರು ಎಂದರೆ ಸರಿಯಲ್ಲ. ಚಾಸಾ 1 ರವರು ಸ್ಥಳ ತೋರಿಸಿದಾಗ ನಿಪಿ 3 ಭಾವಚಿತ್ರ ತೆಗೆಯಲಾಗಿದೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಟಿಡಿಎಂ ವಕೀಲರಿಂದಃ**

6) ಸಹಿಯನ್ನುಹೊರತುಪಡಿಸಿ ನಿಪಿ 2ರ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಘಟನೆಯ ಬಗ್ಗೆ ನನಗೇನು ಗೊತ್ತಿಲ್ಲ ಎಂದರೆ ಸರಿ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**
5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ